ನಿರ್ಣಯ

## ಸದಸ್ಯರುಗಳ ಅಮಾನತ್ತನ್ನು ರದ್ದುಗೊಳಿಸುವ ಬಗ್ಗೆ

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಶಾಸನ ಮತ್ತು ಸಂಸದೀಯ ವ್ಯವಹಾರಗಳ ಸಚಿವರು).— ಮಾನ್ಯ ಅಧ್ಯಕ್ಷರೇ, ತಮ್ಮ ಅನುಮತಿ ಪಡೆದು ಸಭೆಯ ಒಪ್ಪಿಗೆಗೆ ನಿರ್ಣಯವನ್ನು ಮಂಡಿಸುತ್ತಿದ್ದೇನೆ.

"ದಿನಾಂಕ ೨೫ನೇ ಮಾರ್ಚ್ ೧೯೪೪, ೨೮ನೇ ಮಾರ್ಚ್ ೧೯೪೪, ೨೯ನೇ ಮಾರ್ಚ್ ೧೯೪೪ ಹಾಗೂ ೩೦ನೇ ಮಾರ್ಚ್ ೧೯೪೪ ರ ದಿನಾಂಕಗಳನ್ನು ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತೆ ಅಮಾನತ್ತುಗೊಳಿಸಲಾಗಿತ್ತು. ಈ ಅಮಾನತ್ತನ್ನು ರದ್ದುಗೊಳಿಸಿ ಮಾನ್ಯ ಸದಸ್ಯರುಗಳು ಈ ಉಪವೇಶನಕ್ಕೆ ಹಾಜರಾಗುವಂತೆ ಮಾಡಬೇಕೆಂದು ಈ ನಿರ್ಣಯವನ್ನು ಮಂಡಿಸುತ್ತೇನೆ, ಈ ನಿರ್ಣಯವನ್ನು ತಾವುಗಳೆಲ್ಲರೂ ಸಹ ಒಮ್ಮತದಿಂದ ಒಪ್ಪಿಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀಯುತರುಗಳಾದ :

೧. ಆರ್. ವಿ. ದೇಶಪಾಂಡೆ
೨. ಡಿ. ಬಿ. ಚಂದ್ರೇಗೌಡ
೩. ಬಿ. ಹಂಪನಗೌಡ
೪. ಪಿ. ಸಿ. ಸಿದ್ದನಗೌಡರ್
೫. ಬಿ. ಹೆಚ್. ಬನ್ನಿಕೋಡ್
೬. ಎಂ. ಎಸ್. ಪಾಟೀಲ್
೭. ಜೆ. ಸಿ. ಮಾಧುಸ್ವಾಮಿ
೮. ಗುರುಪಾದಪ್ಪ ನಾಗಮಾರಪಲ್ಲಿ
೯. ಹೆಚ್. ಏಕಾಂತಯ್ಯ
೧೦. ಉಮೇಶ್ ಕಟ್ಟಿ
೧೧. ಆರ್. ಎಲ್. ಜಾಲಪ್ಪ
೧೨. ಎಂ. ಕೆ. ಪಟ್ಟಣಶೆಟ್ಟಿ
೧೩. ಶಿವಾನಂದ ಹೆಚ್. ಕೌಜಲಗಿ
೧೪. ಪಿ. ಭೈರೇಗೌಡ
೧೫. ಪಿ. ಜಿ. ಆರ್. ಸಿಂಧ್ಯ
೧೬. ಬಸವರಾಜ್ ಪಾಟೀಲ್ ಅಟ್ಟೂರ್
೧೭. ವಿಜಯಕುಮಾರ್ ಸರನಾಯಕ್
೧೮. ಹೆಚ್. ವೈ. ಮೇಟಿ
೧೯. ಜಿ. ಜಿ. ಯಲ್ಲಿಗುತ್ತಿ
೨೦. ಎಂ. ನಾರಾಯಣಸ್ವಾಮಿ
೨೧. ಬಸವರಾಜ್ ರಾಯರೆಡ್ಡಿ
೨೨. ಸುಭಾಸ್ ಜೋಷಿ.

ಅಧ್ಯಕ್ಷರು.—ಪ್ರಸ್ತಾಪ ಏನೆಂದರೆ, ದಿನಾಂಕ ೨೫ನೇ ಮಾರ್ಚ್ ೧೯೪೪, ೨೮ನೇ ಮಾರ್ಚ್ ೧೯೪೪ ಹಾಗೂ ೩೦ನೇ ಮಾರ್ಚ್ ೧೯೪೪ ರ ದಿನಾಂಕಗಳನ್ನು ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ಸದನದ ಕಾರ್ಯಕಲಾಪಗಳಲ್ಲಿ ಭಾಗವಹಿಸದಂತೆ ಅಮಾನತ್ತುಗೊಳಿಸಲಾಗಿತ್ತು, ಈ ಅಮಾನತ್ತನ್ನು ರದ್ದುಗೊಳಿಸಿ ಮಾನ್ಯ ಸದಸ್ಯರುಗಳು ಈ ಉಪವೇಶನಕ್ಕೆ ಹಾಜರಾಗುವಂತೆ ಮಾಡುವುದು.

ಶ್ರೀಯುತರುಗಳಾದ :

೧ ಆರ್. ವಿ. ದೇಶಪಾಂಡೆ
೨ ಡಿ. ಬಿ. ಚಂದ್ರೇಗೌಡ
೩ ಬಿ. ಹಂಪನಗೌಡ
೪ ಪಿ. ಸಿ. ಸಿದ್ದನಗೌಡರ್

೫ ಬಿ. ಹೆಚ್. ಬನ್ನಿಕೋಡ್
೬ ಎಂ. ಎಸ್. ಪಾಟೀರ್
೭ ಜೆ. ಸಿ. ಮಾದುಸ್ವಾಮಿ
೮ ಗುರುಪಾದಪ್ಪ ನಾಗಮಾರಪಲ್ಲಿ
೯ ಹೆಚ್. ವಿಕಾಂತಯ್ಯ
೧೦ ಉಮೇಶ್ ಕಟ್ಟಿ
೧೧ ಆರ್, ಎಲ್. ಜಾಲಪ್ಪ
೧೨ ಎಂ. ಕೆ. ಪಟ್ಟಣಶೆಟ್ಟಿ
೧೩ ಶಿವಾನಂದ ಹೆಚ್. ಕೌಜಲಗಿ
೧೪ ಸಿ. ಭೈರೇಗೌಡ
೧೫ ಪಿ. ಜಿ, ಆರ್, ಸಿಂಧ್ಯಾ
೧೬ ಬಸವರಾಜ್ ಪಾಟೀಲ್
೧೭ ವಿಜಯಕುಮಾರ್ ಸರನಾಯಕ್
೧೮ ಹೆಚ್. ವೈ. ಮೇಟಿ
೧೯ ಜಿ, ಜಿ. ಯಲ್ಲಿಗುತ್ತಿ
೨೦ ಎಂ. ನಾರಾಯಣಸ್ವಾಮಿ
೨೧ ಬಸವರಾಜ್ ರಾಯರೆಡ್ಡಿ
೨೨ ಸುಭಾಷ್ ಜೋಷಿ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು, ನಿರ್ಣಯಕ್ಕೆ ಅನುಮೋದನೆ ದೊರಕಿತು

## ೧೯೯೪-೯೫ನೇ ಸಾಲಿನ ಇಲಾಖಾ ಬೇಡಿಕೆಗಳಿಗೆ ಸಂಬಂಧಿಸಿದ ವಿಶೇಷ ಸಮಿತಿಗಳಿಗೆ ಕಾಲಾವಕಾಶ ನೀಡುವ ಬಗ್ಗೆ

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು). — ೧೯೯೪-೯೫ನೇ ಸಾಲಿನ ಇಲಾಖಾ ಬೇಡಿಕೆಗಳನ್ನು ಸಂಬಂಧಿಸಿದ ವಿಷಯ ಸಮಿತಿಗಳಿಗೆ ವಿವರವಾಗಿ ಪರಿಶೀಲಿಸಲು ಹಾಗೂ ಸಮಿತಿಯ ವರದಿಗಳನ್ನು ಸದನಕ್ಕೆ ಸಲ್ಲಿಸಲು ಈ ಸದನ ಒಪ್ಪಬಹುದು. ಮತ್ತು ಮೊದಲನೇ ಬಾರಿ ಈ ಸಮಿತಿಯನ್ನು ರಚಿಸಲ್ಪಟ್ಟಿರುವುದರಿಂದ ಸದನಕ್ಕೆ ವರದಿ ಸಲ್ಲಿಸಲು ಆರು ವಾರಗಳ ಕಾಲಾವಕಾಶವನ್ನು ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು. —ಪ್ರಸ್ತಾವ ಏನೆಂದರೆ: ೧೯೯೪-೯೫ನೇ ಸಾಲಿನ ಮೇಲಿನ ಇಲಾಖೆ ಬೇಡಿಕೆಗಳನ್ನು ಸಂಬಂಧಿಸಿದ ವಿಷಯ ಸಮಿತಿಗಳಿಗೆ ವಿವರವಾಗಿ ಪರಿಶೀಲಿಸಲು ಹಾಗೂ ಸಮಿತಿಯ ವರದಿಯನ್ನು ಸದನಕ್ಕೆ ಸಲ್ಲಿಸಲು ಈ ಸದನವು ಒಪ್ಪಬಹುದು. ಮೊದಲನೇ ಬಾರಿ ಈ ಸಮಿತಿಗಳು ರಚಿಸಲ್ಪಟ್ಟಿರುವುದರಿಂದ ಸದನಕ್ಕೆ ವರದಿ ಸಲ್ಲಿಸಲು ಆರು ವಾರಗಳು ಕಾಲಾವಕಾಶವನ್ನು ನೀಡುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ಎಂ. ಪಿ. ಕೇಶವಮೂರ್ತಿ (ಅರಣ್ಯ ರಾಜ್ಯ ಮಂತ್ರಿಗಳು). — ಮಾನ್ಯ ಸಭಾಪತಿಗಳೇ, (೧) ಕರ್ನಾಟಕ ಅರಣ್ಯ ಅಧಿನಿಯಮ ೧೯೬೩–೬೪ ಕರ್ನಾಟಕ ಅಧಿನಿಯಮ ೫(೨೯) ಪ್ರಕರಣದ ಒಂದನೇ ಪ್ರಕರಣದಿಂದ ಪ್ರದತ್ತ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ರಾಜ್ಯ ವಿಧಾನ ಮಂಡಲದ ಸದನಗಳ ಅನುಮೋದನೆ ಸಹಿತ ಈ ಕೆಳಕಂಡ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿರುವ ಜಮೀನನ್ನು ೨೯ ಅಕ್ಟೋಬರ್ ೧೯೯೫ನೇ ದಿನಾಂಕದಿಂದ ಪರಿಣಾಮಕಾರಿ ಆಗುವಂತೆ ಮೀಸಲು ಅರಣ್ಯ ಆಗಿರುವುದು ನಿಂತು ಹೋಗುತ್ತದೆ ಎಂಬುದಾಗಿ ಈ ಮೂಲಕ ನಿರ್ದೇಶಿಸುತ್ತೇನೆ. ಬೆಳಗಾಂ ಜಿಲ್ಲೆ ಆಥಣಿ ಖಾನಾಪುರ ಗ್ರಾಮ ಸರ್ವೇ ನಂಬರ್ ೨೭, ಆರು ಎಕರೆ ಪ್ರದೇಶವನ್ನು ಯುದ್ಧದಲ್ಲಿ ಮಡಿದ ಯೋಧ ದಿವಂಗತ ಶ್ರೀ ಕೃಷ್ಣ ಕಾಂಬ್ಳೆ ಇವರ ಪತ್ನಿ ಶ್ರೀಮತಿ ಗಂಗಾಧರ ಭಾಯಿ ಅವರಿಗೆ ಅರಣ್ಯೇತರ ಉದ್ದೇಶಕ್ಕಾಗಿ ಮಂಜೂರು ಮಾಡಬೇಕೆಂದು ಕೋರುತ್ತೇನೆ.